ಶ್ರೀ. ಮಗನಲಾಲ್ ಭೀಮಾಜಿ ಪಟೇಲ್ ಇವರು ಅಂಬೇವಾಡಿ ಗ್ರಾಮ. ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಸರ್ವೆ ನಂ. 59/3, 59/13, 59/14 ಮತ್ತು 59/20 ಒಟ್ಟು 7 ಎಕರೆ 10 ಗುಂಟೆ 08 ಆಣೆ ಪ್ರದೇಶದಲ್ಲಿ ವರ್ಷಕ್ಕೆ ಗರಿಷ್ಠ 1,51,620 ಟನ್ ಗಳಷ್ಟು ಕಟ್ಟಡಕಲ್ಲು ಗಣಿಗಾರಿಕೆಯನ್ನು ಸ್ಥಾಪನೆ ಮಾಡಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಹಿನ್ನಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.

ದಿನಾಂಕ : 08-06-2022.

ವೇಳೆ : ಬೆಳಿಗ್ಗೆ 11:30 ಘಂಟೆ.

ಸ್ಥಳ : ಶ್ರೀ. ಮಗನಲಾಲ್ ಭೀಮಾಜಿ ಪಟೇಲ್ ರವರ ಪಟ್ಟಾ ಜಮೀನಿನ ಉದ್ದೇಶಿತ ಯೋಜನಾ ಸ್ಥಳದಲ್ಲಿ ಸರ್ವೆ ನಂ. 59/3, 59/13, 59/14 ಮತ್ತು 59/20 ಅಂಬೇವಾಡಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಶ್ರೀ. ಮಗನಲಾಲ್ ಭೀಮಾಜಿ ಪಟೇಲ್ ಇವರು ಅಂಬೇವಾಡಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಸರ್ವೆ ನಂ. 59/3, 59/13, 59/14 ಮತ್ತು 59/20 ಒಟ್ಟು 7 ಎಕರೆ 10 ಗುಂಟೆ 08 ಆಣೆ ಪ್ರದೇಶದಲ್ಲಿ ವರ್ಷಕ್ಕೆ 1,51,620 ಟನ್ ಗಳಷ್ಟು ಕಟ್ಟಡಕಲ್ಲು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 08-06-2022 ರಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಶ್ರೀ. ಮಗನಲಾಲ್ ಭೀಮಾಜಿ ಪಟೇಲ್ ಅಂಬೇವಾಡಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-5 |
| ಉದ್ದೇಶಿತ ಕಟ್ಟಡ ಕಲ್ಲು ಗಣಿಗಾರಿಕೆಯ ಮಾಲೀಕರ ಶಪಥ ಪತ್ರ | : | ಅನುಬಂಧ-6 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 ಮತ್ತು ತದನಂತರದ ತಿದ್ದುಪಡಿ ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಅದರಂತೆ ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆ Terms of Reference (ಟಿಓಆರ್) ಅನ್ನು ಅಂತಿಮಗೊಳಿಸಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ತಿಳಿಸಿರುತ್ತಾರೆ. ಶ್ರೀ. ಮಗನಲಾಲ್ ಭೀಮಾಜಿ ಪಟೇಲ್ ಅಂಬೇವಾಡಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 29-01-2022 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪತ್ರಿಕೆಗಳಾದ "ಪ್ರಜಾವಾಣಿ" (ಕನ್ನಡ) ಮತ್ತು ಇಂಡಿಯನ್ ಎಕ್ಸಪ್ರೆಸ್" (ಆಂಗ್ಲ ಭಾಷೆ)ಯಲ್ಲಿ ದಿನಾಂಕ: 07-05-2022 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ವಿಜಯ ವಾಣಿ" ದಿನ ಪತ್ರಿಕೆಯಲ್ಲಿ ದಿನಾಂಕ: 10-05-2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಇದುವರೆಗೆ ಲಿಖಿತ ರೂಪದಲ್ಲಿ ಸಲಹೆ, ಅನಿಸಿಕೆಗಳನ್ನು, ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ಸಾರ್ವಜನಿಕರು ಸಲ್ಲಿಸಿರುವುದಿಲ್ಲ.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 08-06-2022 ರಂದು ಬೆಳಿಗ್ಗೆ 11:30 ಘಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಜಗದೀಶ. ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-1 ಇವರು ಶ್ರೀ ನಿತೇಶ್ ಕೆ ಪಾಟೀಲ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಶ್ರೀ. ರಾಜಶೇಖರ ಪುರಾಣಿಕ, ಹಿರಿಯ ಪರಿಸರ ಅಧಿಕಾರಿಗಳು (ಪ್ರಭಾರಿ), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ, ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಒಂಬತ್ತು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಶ್ರೀ. ಸಾಯಿ ಮಾನಸಾ ನೇಚರ್ ಟೆಕ್ ಪ್ರೈವೇಟ್ ಲಿಮಿಟೆಡ್, ಹೈದ್ರಾಬಾದ್ ರವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

ಮಾನ್ಯ ಜಿಲ್ಲಾಧಿಕಾರಿಗಳು, ತಲಾಟಿ ಮತ್ತು ರೆವನ್ಯೂ ಇನ್ಸಪೆಕ್ಟರ್‌ಗಳಿಗೆ, ಸರ್ವೇ ನಂ. 59/3, 13, 14 ಮತ್ತು 20 ಇದೆ. ಈ ಸರ್ವೆ ನಂಬರಗಳು ಎಲ್ಲಿ ಬರುತ್ತವೆ ಗ್ರಾಮ ನಕಾಶೆಯಲ್ಲಿ ತೋರಿಸಿ ಎಂದು ಹೇಳಿದರು. ಪರಿಶೀಲಿಸಿದ ನಂತರ 59/3, 59/13, 59/14 ಮತ್ತು 59/20 ಸರ್ವೇನಂ.ಗಳು ಆಗಿದ್ದಲ್ಲಿ, ತಾವು ತಮ್ಮ ಪ್ರಸೆಂಟೇಶನ್‌ಲ್ಲಿ 59/3, 59/13, 59/14 ಮತ್ತು 59/20 ಎಂದು ನಮೂದಿಸಬೇಕು ಎಂದು ತಿಳಿಸಿದರು.

ಕ್ವಾರಿಗಳಿಗೆ ಒಣ ಕಲ್ಲಿನ ಗೋಡೆಯನ್ನು (ರಬ್ಬಲ್‌ವಾಲ್) ಅಳವಡಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಈ ಸುತ್ತಲಿನ ಕ್ವಾರಿಗಳಲ್ಲಿ, ಒಬ್ಬರಾದರೂ ಮಾಡಿದ್ದಾರಾ ತೋರಿಸಿ ಎಂದು ಪ್ರಶ್ನಿಸಿದರು. ಅನುಮತಿ ತೆಗೆದುಕೊಳ್ಳುವ ಮುಂಚೆ, ಏನು ಪ್ರಸೆಂಟ್ಷೇಶನ್ ಕೊಡ್ತಿರಾ, ಅದನ್ನು ಮಾಡಿ ತೋರಿಸಬೇಕು ಎಂದು ಯೋಜನಾದಾರರಿಗೆ ತಿಳಿಸಿದರು.

ಶ್ರೀ.ಗಿರೀಶ್ ಯೋಜನೆಯ ಸಲಹೆಗಾರರು ಮಾತನಾಡುತ್ತಾ ಇಲ್ಲಿ ಉಪಸ್ಥಿತರಿರುವ ಮಾನ್ಯ ಜಿಲ್ಲಾಧಿಕಾರಿಗಳವರಿಗೆ, ಜಗದೀಶ್ ಸರ್, ಪುರಾಣಿಕ ಸರ್. ಎಲ್ಲರಿಗೂ ನಮಸ್ಕಾರಗಳು. ನಾನು ಪರಿಸರದ ಬಗ್ಗೆ ಒಂದಿಷ್ಟು ಆಲೋಚನೆ ಮಾಡಿರುತ್ತೇನೆ ಗಿಡಮರಗಳಿರಬಹುದು, ಹಣ್ಣಿನ ಮರಗಳಿರಬಹುದು, ಅಂಬೇವಾಡಿ ಗ್ರಾಮದ ನಾಲಾ ಇರಬಹುದು ಕೆರೆ ಇರಬಹುದು ಇಲ್ಲಿ ಎರಡೂ ಕಡೆಗೆ ಗಿಡಗಳನ್ನು ನೆಟ್ಟು ಬೆಳಸಬಹುದು ಮತ್ತು ಕ್ವಾರಿ ಮಾಲಿಕರಿಗೆ ಎಲ್ಲರಿಗೂ ನಾನು ವಿನಂತಿಸುತ್ತೇನೆ ಬೇಸಿಗೆ ಕಾಲದಲ್ಲಿ ಪಕ್ಷಿಗಳಿಗೆ , ಪ್ರಾಣಿಗಳಿಗೆ ಬೇಸಿಗೆ ಕಾಲದಲ್ಲಿ ನೀರು ಇರುವುದಿಲ್ಲ. ಅಲ್ಲಲ್ಲಿ ನೀರಿನ ಟ್ಯಾಂಕಗಳನ್ನು ನಿರ್ಮಿಸಿದರೆ ಪ್ರಾಣಿ ಪಕ್ಷಿಗಳಿಗೆ ಅನುಕೂಲವಾಗುತ್ತದೆ. ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ, ಅಂಬೇವಾಡಿ ಗ್ರಾಮದಲ್ಲಿ ಸ್ವ ಸಹಾಯ ಪದ್ಧತಿ ಮಹಿಳಾ ಗುಂಪಿಗೆ ತೆಂಗಿನ ಮರದ ಕಾಯಿಗಳನ್ನು ಖರೀದಿಸಿ ಸುಲಿಯಲು ಯಂತ್ರಗಳನ್ನು ನಮ್ಮ ಮಾಲಿಕರು ನೀಡುತ್ತಿದ್ದಾರೆ. ಹಾಗೇ ಇನ್ನುಳಿದ ಮಾಲೀಕರು ಪಾಪಡ ತಯಾರಿಸುವ ಯಂತ್ರ, ಆಯಿಲ್ ಪ್ರೋಸೆಸ್ಸಿಂಗ್ ಯಂತ್ರ ಹಾಗೂ ಇನ್ನಿತರೆ ಯಂತ್ರಗಳನ್ನು ಕೊಡಿಸಿದ್ದಲ್ಲಿ ಮಹಿಳೆಯರಿಗೆ ಉದ್ಯೋಗ ಅವಕಾಶ ನೀಡಿದಂತಾಗುತ್ತದೆ.

ಮಾನ್ಯ ಜಿಲ್ಲಾಧಿಕಾರಿಗಳು ಈ ಸೌಕರ್ಯಗಳನ್ನು ಯಾವಾಗ ನೀಡುತ್ತೀರಿ? ಎಂದು ಪ್ರಶ್ನಿಸಿದರು. ಸದರಿಯವರು 05 ವರ್ಷದೊಳಗೆ ನೀಡುತ್ತೇವೆ ಎಂದು ಹೇಳಿದರು.

ಮಾನ್ಯ ಜಿಲ್ಲಾಧಿಕಾರಿಗಳು: ಈ ಪ್ರಸೆಂಟೇಶನ್ ಕೇವಲ ಪಾಠ ಆಗಬಾರದು. ಪ್ರತಿವರ್ಷದಲ್ಲಿ ಏನೇನು ಕೊಡುತ್ತೀರಿ ಅದನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ, ಗ್ರಾಮ ಪಂಚಾಯತದವರಿಗೆ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೆ ಕಮಿಟ್‌ಮೆಂಟ್ ಲೆಟರ್ ಮುಖಾಂತರ ಬರೆದುಕೊಡಿ ಎಂದು ಹೇಳಿದರು. ಅನುಮತಿಗೋಸ್ಕರ ಪ್ರಸೆಂಟೇಶನ್ ಮಾಡುವುದಲ್ಲ, ಅನುಮತಿ ಸಿಕ್ಕ ಮೇಲೆ ಇವುಗಳನ್ನು ಪೂರೈಸುವಂತೆ ತಿಳಿಸಿದರು.

ಶ್ರೀ. ಜಗದೀಶ್ ಐ. ಹೆಚ್, ಪರಿಸರ ಅಧಿಕಾರಿಗಳು, ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ಹೇಳುವುದಿದ್ದರೆ ವೇದಿಕೆ ಹತ್ತಿರ ಬಂದು ತಮ್ಮ ಹೆಸರು, ಊರು ಮತ್ತು ಅಭಿಪ್ರಾಯಗಳನ್ನು ತಿಳಿಸಬೇಕು ಎಂದರು.

ಸಾರ್ವಜನಿಕರು ವ್ಯಕ್ತಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

1. **ಶ್ರೀ. ಬಾಬು ದೇವಪ್ಪ ತರಳೆ, ಅಂಬೇವಾಡಿ ಗ್ರಾಮ:** ನನ್ನ ಜಮೀನು ಇವರ ಗಣಿಗಾರಿಕೆಗೆ ಹೊಂದಿಕೊಂಡಿದ್ದು, ಇದರಿಂದ ನಮಗೆ ಯಾವುದೇ ತೊಂದರೆ ಇರುವುದಿಲ್ಲ. ಮತ್ತು ಬೆಳೆ ಬೆಳೆಯಲು ಸದರಿ ಮಾಲೀಕರು ನೀರು ಸರಬರಾಜು ಮಾಡುತ್ತಾರೆ. ಇದರಿಂದ ಮಳೆ ಇಲ್ಲದ ಸಮಯದಲ್ಲಿ ನಮಗೆ ಬೆಳೆ ಬೆಳೆಯಲು ತುಂಬಾ ಉಪಯೋಗವಾಗಿದೆ ಹಾಗೂ ದೇವಾಲಯ, ಸರ್ಕಾರಿ ಶಾಲೆಗಳ ದುರಸ್ಥಿ ಅಥವಾ ಕಟ್ಟುವ ಸಮಯದಲ್ಲಿ ಉಚಿತವಾಗಿ ಕಲ್ಲುಗಳನ್ನು ನೀಡಿರುತ್ತಾರೆ ಎಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

2. **ನಾಗೇಂದ್ರ ಬಸವಂತ ರಾಳೆ: ಅಂಬೇವಾಡಿ ಗ್ರಾಮ:** ಸದರಿ ಕ್ವಾರಿ ಮಾಲೀಕರ ಪಕ್ಕದಲ್ಲಿ ಇರುವ ನಮ್ಮ ಜಮೀನುಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ ಮತ್ತು ಅಂಬೇವಾಡಿ ಗ್ರಾಮದಲ್ಲಿ ರೈತನೊಬ್ಬನಿಗೆ ಹಾವು ಕಚ್ಚಿದ ಸಮಯದಲ್ಲಿ ಅವರಿಗೆಲ್ಲ ವಾಹನವನ್ನು ನೀಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ಸಹಾಯ ಸಹಾಯಮಾಡಿದ್ದಾರೆ.

3. **ಕೃಷ್ಣಾ ಪಾಟೀಲ, ಕೆ.ಹೆಚ್. ಕಂಗ್ರಾಳಿ:** ಸುತ್ತಮುತ್ತಲಿರುವ ಜನರಿಗೆ ಉದ್ಯೋಗ ಅವಕಾಶ ಸಿಗುತ್ತದೆ ಮತ್ತು ಪ್ರಾಣಿಗಳು ಮರಣಹೊಂದಿದಾಗ ಸದರಿ ಮಾಲೀಕರು ಜೆಸಿಬಿ ಮತ್ತು ಟ್ರಕ್ ವಾಹನಗಳನ್ನು ನೀಡಿ ಪ್ರಾಣಿಗಳನ್ನು ಅಂತ್ಯಕ್ರಿಯೆ ಮಾಡಲು ತುಂಬಾ ಸಹಾಯ ಮಾಡುತ್ತಿರುವುದರಿಂದ ನಮಗೆ ತುಂಬಾ ಸಹಾಯವಾಗಿದೆ. ನಮ್ಮ ಜಮೀನು ಕಲ್ಲು ಗಣಿಗಾರಿಕೆ ಸುತ್ತಮುತ್ತ ಇದ್ದು ಕಲ್ಲುಗಣಿಗಾರಿಕೆಯಲ್ಲಿ ಇರುವ ನೀರನ್ನು ಪೂರೈಕೆ ಮಾಡಿ ನಮಗೆ ಬೆಳೆ ಬೆಳೆಯಲು ಸಹಾಯ ಮಾಡಿರುತ್ತಾರೆ.

   ಶ್ರೀ. ಜಗದೀಶ್ ಐ. ಹೆಚ್, ಪರಿಸರ ಅಧಿಕಾರಿಗಳು, ಮತ್ತೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ಹೇಳುವುದಿದ್ದರೆ ಬೇಗ ವೇದಿಕೆ ಹತ್ತಿರ ಬಂದು ತಿಳಿಸಬೇಕು ಎಂದರು.

4. ಯಲ್ಲಪ್ಪ ಲೋಹಾರ ಅಂಬೇವಾಡಿ ಗ್ರಾಮ: ಈ ಸಭೆಗೆ ಸಿ.ಎಮ್.ಪಾಟೀಲರು ಬಂದಿದ್ದಾರೆ ಅದರಂತೆ ಹರೀಶ್ ಪಟೇಲ್ ಇದ್ದಾರೆ. ಘಟಕದ ಮಾಲೀಕರು ಶೈಕ್ಷಣಿಕವಾಗಿ ಸಹಾಯ ಮಾಡಿರುತ್ತಾರೆ. ದೇವಾಲಯ ಮಂದಿರಗಳಿಗೆ ಪಾಲಿಕೆಯನ್ನು ನೀಡಿ ಸಹಾಯ ಮಾಡಿರುತ್ತಾರೆ ಮತ್ತು ಫಂಡರಪುರ ಯಾತ್ರೆಯನ್ನು ಮಾಡುವಾಗ ಸಾರ್ವಜನಿಕರಿಗೆ ಮಹಾಪ್ರಸಾದಕ್ಕೆ ಸಹಾಯ ಮಾಡಿರುತ್ತಾರೆ, ಇನ್ನಿತರೆ ಕೆಲಸಗಳಿಗೆ ಖಡಿಗಳನ್ನು, ವಾಹನಗಳನ್ನು, ಜೆಸಿಬಿ, ಟ್ರ್ಯಾಕ್ಟರ್ ನೀಡಿ ತುಂಬಾ ಸಹಾಯ ಮಾಡಿರುತ್ತಾರೆ.

   ಮಾನ್ಯ ಜಿಲ್ಲಾಧಿಕಾರಿಗಳು ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ಹೇಳುವುದಿದ್ದರೆ ಬೇಗ ಬಂದು ತಿಳಿಸಬೇಕು ಎಂದರು.

5. **ಶ್ರೀ. ರೇಮಾಣಿ ಗೀರು ತರಳೆ, ಅಂಬೇವಾಡಿ ಗ್ರಾಮ:** ಈ ಘಟಕದ ಮಾಲೀಕರು ಗ್ರಾಮದಲ್ಲಿರುವ ದೇವಾಲಯಕ್ಕೆ ಪಲ್ಲಕ್ಕಿಯ ಅವಶ್ಯಕತೆ ಇದ್ದಾಗ ತಮ್ಮ ಸ್ವಂತ ಹಣದಿಂದ ಕಟ್ಟಿಗೆ ಅವಶ್ಯಕ ಸಾಮಗ್ರಿಗಳನ್ನು ನೀಡಿ ತಾವೆ ಮುಂದೆ ನಿಂತು ಪಲ್ಲಕ್ಕಿಯನ್ನು ತಯಾರಿಸಿ, ದೇವಾಲಯಕ್ಕೆ ಹಸ್ತಾಂತರಿಸಿ ನಮ್ಮ ಗ್ರಾಮಕ್ಕೆ ಸಹಾಯ ಮಾಡಿರುತ್ತಾರೆ.

ಮಾನ್ಯ ಜಿಲ್ಲಾಧಿಕಾರಿಗಳು, 500 ಮೀಟರ್ ಸುತ್ತಳತೆಯಲ್ಲಿ 07 ಕ್ವಾರಿಗಳಿದ್ದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರ ಜೊತೆಗೂಡಿ ಪರಿವೀಕ್ಷಣೆ ಮಾಡುತ್ತೇವೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ಹೇಳಿದರು.

ಪರಿಸರ ಅಧಿಕಾರಿಗಳು ಮಾತನಾಡಿ ಸಾರ್ವಜನಿಕರು ಹೇಳಿರುವ ಅಭಿಪ್ರಾಯಗಳ ನಡುವಳಿಗಳನ್ನು ತಯಾರಿಸಿ, ಆಡಿಯೋ ಮತ್ತು ವಿಡಿಯೋ ರೆಕಾರ್ಡಗಳನ್ನು ಲಗತ್ತಿಸಿ, ನಮ್ಮ ಮಂಡಳಿಯ ಕೇಂದ್ರ ಕಛೇರಿ ಬೆಂಗಳೂರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡುತ್ತೇವೆ ಎಂದರು.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

Patilnk

**( ನಿತೇಶ್. ಕೆ. ಪಾಟೀಲ )**
**ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ**
**ದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ**
**ಆಲಿಕೆ ಸಭೆ ಅಧ್ಯಕ್ಷರು, ಬೆಳಗಾವಿ**